# Views on Venkatram ...Prof Radhakrishna

## ಎಸ್. ವೆಂಕಟರಾಮ್

೬೦-೭೦ರ ದಶಕದ ಭಾರತದ ರಾಜಕೀಯ ಚರಿತ್ರೆ, ಸಿದ್ಧಾಂತಗಳನ್ನು ಅಪ್ಪಿಕೊಂಡು ಸ್ವಂತ ಸುಖಗಳನ್ನು ಬದಿಗೊತ್ತಿ ತನಗೆ, ತನ್ನ ಕುಟುಂಬದವರಿಗೆ ಒದಗಿದ ಯಾವುದೇ ಕಷ್ಟ ಕಾರ್ಪಣ್ಯಗಳನ್ನು ಗಮನಿಸದೆ, ಜನಪರ ಚಳವಳಿಗಳಲ್ಲಿ 'ಸಾಮಾಜಿಕರು' ಧುಮುಕಿ ತೇಲಿ ಮುಳುಗುತ್ತಿದ್ದ ಕಾಲವಾದರೆ ದೇಶದ ಸ್ವಾತಂತ್ರಕ್ಕಾಗಿ ರೂಪುಗೊಂಡಿದ್ದ ವೇದಿಕೆ ಕಾಂಗ್ರೆಸ್ ಪಕ್ಷ- ಅಧಿಕಾರಸಕ್ತರ ಆಡೊಂಬಲವಾಗಿ ಮಾರ್ಪಾಡಾಯಿತು. ತೀವ್ರ ಎಡಪಂಥೀಯರು ಸೈದ್ಧಾಂತಿಕ ಮಡಿವಂತಿಕೆಯನ್ನು ಹೊಂದಿ, ಸಂಪತ್ತು, ದ್ರವ್ಯ, ಇವೆಲ್ಲವನ್ನು ದ್ವೇಷದಿಂದ ನೋಡುತ್ತಿದ್ದ ಕಾಲ. ಆಗತಾನೆ ಹುಟ್ಟಿಕೊಂಡ ಹಿಂದೂಧರ್ಮಾಧಾರಿತ ಜನಸಂಘ, ಮತ್ತು ಮುಕ್ತ ಬಂಡವಾಳ ತತ್ವವನ್ನು ಆಧರಿಸಿ ಹುಟ್ಟಿಕೊಂಡ ಸ್ವತಂತ್ರ ಪಕ್ಷ ಬಲಪಂಥೀಯ ವಿಚಾರಧಾರೆಗಳಿಗೆ ತಾಣವಾಗಿದ್ದ ಕಾಲ. ಪ್ರಜಾಪ್ರಭುತ್ವ, ಮುಕ್ತತೆ, ಬಡಜನರ ಸೌಖ್ಯ ನೆಮ್ಮದಿಗಳ ಆಶಯುಗಳ ಜತೆ ಯಾವುದೇ ದಮನಕಾರಿ ಪ್ರಕ್ರಿಯೆಗಳನ್ನು ಒಪ್ಪದ ಒಂದು ರಾಜಕೀಯ ಸೈದ್ಧಾಂತಿಕ ತಂಡ - ಸಮಾಜವಾದೀ ಪಕ್ಷ. ಭಾರತದ ಅನೇಕ ಸಾಹಿತಿಗಳು, ಕಲಾವಿದರ, ಬುದ್ಧಿಜೀವಿಗಳ, ರಾಜಕೀಯ ಚಿಂತಕರ ಚಾವಡಿಯಾಗಿದ್ದ ಕಾಲ. ಆಗಿನ ಕಾಲದಲ್ಲಿ ಯುವ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದ ಸಿದ್ಧಾಂತಿಗಳು ಮೂವರು ಜನಸಂಘೀಯರು, ಕಮ್ಯೂನಿಷ್ಟರು ಅಥವಾ ಸಮಾಜವಾದಿಗಳು. ಅನೇಕರಿಗೆ ಸಮಾಜವಾದಿಗಳು ಅಂದುಕೊಳ್ಳಲೇ ಹೆಮ್ಮೆ. ಅಲ್ಲಿ ಜನಸಂಘ ಮತ್ತು ಕಮ್ಯೂನಿಷ್ಟರಲ್ಲಿದ್ದ ಸೈದ್ಧಾಂತಿಕ ಬಿಗಿ ಇರಲಿಲ್ಲ. Follow the Leader the Leader himself is an ideaology incarnation ಅಂದರೆ ತನ್ನ ನಾಯಕನೇ ಸಿದ್ಧಾಂತಗಳ ಮೂರ್ತಸ್ವರೂಪ. Leader can never fail and fault 'ನಾಯಕ ಸೋಲಲಾರ ಮತ್ತು ತಪ್ಪು ಮಾಡಲಾರ' ಅನ್ನುವ ಬಿಗು-ಮಾನ ಇರದ, ಸ್ವತಂತ್ರ ಪಕ್ಷದ ಘೋಷಿತ ಬಂಡವಾಳಶಾಹೀ ಧೋರಣೆ ಇರದ, ಕಾಂಗ್ರೆಸ್ಸಿನ ಆಲದ ಮರದ ಕೆಳಗೆ

ಬೆಳೆಯುತ್ತಿದ್ದ ಮುಳ್ಳುಗಂಟೆ ಕಳೆಗಳ ಕಾಟವೂ ಇರದ ಪಕ್ಷ ಸಮಾಜವಾದೀ ಪಕ್ಷ.

ಬೀದಿಗಳ ಹೋರಾಟದಿಂದ ಮೇಲೆದ್ದು ಬಂದ ಜಾರ್ಜ್ ಫರ್ನಾಂಡೀಸ್, ಮಧುಲಿಮಯೆ, ಅಚ್ಯುತ್ ಪಟವರ್ಧನ್, ಎನ್.ಜಿ.ಗೋರೆ, ಹೆಚ್.ವಿ.ಕಾಮತ್, ನಾಥಪೈ, ಮಧುದಂಡವತೆ, ರಬಿರೇ, ಕರ್ಪೂರಿ ಠಾಕೂರ್, ಸರ್ವಮಾನ್ಯ ಡಾ. ಲೋಹಿಯಾ, ಆಶೋಕ್ ಮೆಹ್ತಾ ಒಬ್ಬರೇ ಇಬ್ಬರೇ. ಹೆಸರಾಂತ ಹೆಸರುಗಳು. ನಮ್ಮ ಕರ್ನಾಟಕದಲ್ಲಿ ಗೋಪಾಲಗೌಡ ಅವರಿಂದ ಆಕರ್ಷಿತರಾದ ಜೆ.ಹೆಚ್.ಪಾಟೀಲ್, ಕೋಣಂದೂರು ಲಿಂಗಪ್ಪ, ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಎಸ್.ಎಂ.ಕೃಷ್ಣ, ಕೆ.ಎಚ್.ರಂಗನಾಥ್ ಅನೇಕರು. ಸಾಹಿತ್ಯ, ಸಂಸ್ಕೃತಿ ವಲಯದಲ್ಲಿಯೂ ಡಾ.ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಪ್ರೊ.ರಾಮದಾಸ್, ಪ್ರೊ. ಎಂ.ಡಿ.ನಂಜುಂಡಸ್ವಾಮಿ, ಪಟ್ಟಾಭಿರಾಮರೆಡ್ಡಿ ಇಂತಹ ಅನೇಕರು. ಇವರೆಲ್ಲರ ಜತೆ ಸಾಮರಸ್ಯದ ಕೊಂಡಿಯಾಗಿದ್ದವರು ಶ್ರೀ ಎಸ್.ವೆಂಕಟರಾಮ್.

ಆದರೆ ಇದೇ ಸಮಾಜಾದೀ ಪಕ್ಷ ಹಂಚಿ ಹೋಳಾಗಿ ಎಲ್ಲೆಲ್ಲೂ ಚೆದುರಿ ಬಲಪಂಥೀಯ, ಎಡಪಂಥೀಯ, ಸ್ವಪಂಥೀಯ ರಾಜಕಾರಣದಲ್ಲಿ (ಈಗಂತೂ ಯಾರು ಎಡ ಯಾರು ಬಲ ಅಂತ ಸ್ಪಷ್ಟವಾಗಿ ಚಿತ್ರಿಸುವುದು ಆ ಸಿದ್ಧಾಂತಗಳಿಗೆ ಮಾಡುವ ಅವಮಾನ!) ತೊಡಗಿಬಿಟ್ಟಿದ್ದು ಸಾಮಾಜಿಕ ದುರಂತವೋ ಎನೋ ? ಅಂತೂ ಸತ್ಯ. ಸೈದ್ಧಾಂತಿಕ ಕಟ್ಟುಪಾಡುಗಳು ಜಾಸ್ತಿಯಾದಾಗ ಬದುಕಿನ ಯಾವುದೇ ಹಂತದಲ್ಲಿ ಮನುಷ್ಯರು ಜೀವನ ಅಂದರೆ ಸ್ವಜೀವನನಿಷ್ಠರಾಗುವುದು ಅಸಹಜ ಬೆಳವಣಿಗೆಯೇನಲ್ಲ. ಓರ್ವ ರಾಜಕಾರಣಿಯಿಂದ 'ತ್ಯಾಗ ಪ್ರಾಮಾಣಿಕತೆ, ಸೇವೆ'ಯನ್ನು ಬಯಸಿ, ಆತನನ್ನು 'ಹುತಾತ್ಮ'ನನ್ನಾಗಿ ಮಾಡಲು ಬಯಸುವ ಸಮಾಜ ತನ್ನ ನಡುವಳಿಕೆಗಳ ಬಗ್ಗೆಯೂ ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಆದರೂ ಸಮಾಜ ಭೋಗಮುಖಿಯಾಗಿ ರಾಜಕಾರಣಿ ಭ್ರಷ್ಟತೆಯ ಜತೆ ಚಕ್ಕಂದವಾಡುವ ಮೊದಲೇ ನಮ್ಮ ಅಪರೂಪದ ತಾಜಾಮನುಷ್ಯ' ಎಸ್.ವೆಂಕಟರಾಮ್ ೧೯೮೧ರ ಜನವರಿ ೨೧ರಂದು ನಿಧನರಾದರು. ತನ್ನ ಕೊನೆಯ ದಿನಗಳಲ್ಲಿ ಯಾವುದೇ ಪಕ್ಷವನ್ನು ಸೇರದೆ ಕರ್ನಾಟಕ ರಾಜ್ಯ ರೈತಕಾರ್ಮಿಕರ ಪರಿಷತ್ತನ್ನು ಸ್ಥಾಪಿಸಿ ಅದು ದುಡಿಯುವ ವರ್ಗ, ಮಹಿಳೆಯರು, ರೈತರಿಗೆ ಪ್ರಭಾವೀ ವೇದಿಕೆಯಾಗಬೇಕೆಂದು ಸಂಕಲ್ಪಿಸಿದವರು.

ಪ್ರತಿಭಾವಂತ ವಿದ್ಯಾರ್ಥಿಯಾಗಿ ಮೈಸೂರು ವಿಶ್ವವಿದ್ಯಾನಿಲಯದಿಂದ ಸಿವಿಲ್

ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪದವಿ ಪಡೆದು, ಮುಂಬಯಿ ಮಹಾನಗರದಲ್ಲಿ ಕೇಂದ್ರ ಸರ್ಕಾರದ ಡ್ರಾಫ್ಟ್ಸ್‌ಮನ್ ಆಗಿ ಸೇವೆ ಸಲ್ಲಿಸಲು ಆರಂಭಿಸಿದ ವೆಂಕಟರಾಮ್, ಅದೇ ವೃತ್ತಿಯಲ್ಲಿ ಮುಂದುವರೆದಿದ್ದರೆ ಓರ್ವ ಇಂಜಿನಿಯರ್-ಇನ್-ಚೀಫ್ ಆಗಿ ನಿವೃತ್ತಿಯಾಗುತ್ತಿದ್ದರು. ಆದರೆ ಲೋಹಿಯಾ ಸಮಾಜವಾದದಿಂದ ಪ್ರಭಾವಿತರಾದ ಅವರು ೧೯೪೫ರಲ್ಲಿ ಕಾಂಗ್ರೆಸ್ ಸೊಷಿಯಲಿಸ್ಟ್ ಪಕ್ಷ ಸೇರಿದರು. ಆಚಾರ್ಯ ಕೃಪಲಾನಿ, ಜಯಪ್ರಕಾಶ ನಾರಾಯಣರಂತಹ ಬಡಜನಪಂಥೀಯರಿಂದ ಪ್ರಭಾವಿತರಾಗಿ ಕರ್ನಾಟಕದಲ್ಲಿ ಸೊಷಿಯಲಿಸ್ಟ್ ಪಕ್ಷದ ಸ್ಥಾಪಕರಾಗಿ ವಿವಿಧ ಜವಾಬ್ದಾರಿಗಳನ್ನು ಹೊತ್ತು ದೇಹ, ಜೀವ ಎರಡನ್ನೂ ಸವೆಸಿದರು. ೧೯೭೫ರ ಜೂನ್‌ನಿಂದ ೧೯೭೭ರ ಜನವರಿವರೆಗೆ ಹೇರಲ್ಪಟ್ಟ ತುರ್ತುಪರಿಸ್ಥಿತಿಯ ಕಾಲದಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ತುರಂಗ ವಾಸ ಅನುಭವಿಸಿದರು.

೧೯೪೭ರಿಂದ ಕಾರ್ಮಿಕ ಸಂಘಟನೆಗಳ ಜತೆ ಅವರ ಸಾಂಗತ್ಯ. ಇದರಿಂದಾಗಿ ಸೇವೆಯಿಂದ ವಜಾ ಮಾಡಿಸಲ್ಪಟ್ಟರು. ೧೯೫೨ರಲ್ಲಿ ಮುಂಬೈಯಿಂದ ಬರಿಗೈಯಲ್ಲಿ ಪತ್ನಿ ಸರೋಜಮ್ಮನವರ ಜತೆ ಬೆಂಗಳೂರಿಗೆ. ಊಟಕ್ಕೆ ವಸತಿಗೆ ಏನೂ ಇಲ್ಲ. ಊಟಕ್ಕಿಲ್ಲದಿದ್ದಾಗ ತನ್ನ ಪತ್ನಿಗಾದರೂ ಊಟ ಸಿಗಲಿ ಅಂತ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ದಾಖಲು ಮಾಡಿಸಿದರು. ಅಂತಹ ಬಡತನ ಇದ್ದರೂ, ವೆಂಕಟರಾಮ್‌ಅವರಿಗೆ ಕಾರ್ಮಿಕ ಸಂಘಟನೆಯೇ ಜೀವಾಳ. ಬಿನ್ನಿಮಿಲ್ ನೌಕರರ ಸಂಘದಲ್ಲಿ ರೂ ೫೦, ತಿಂಗಳ ಸಂಬಳದಲ್ಲಿ ಕೆಲಸಕ್ಕೆ ಸೇರಿ, ನೌಕರರ ಸಂಘದಲ್ಲಿ ಮನೆಮಾಡಿ, ಆ ಸಂಘದ ಅಧ್ಯಕ್ಷರಾಗಿ ಕೊನೆಗೆ ವಿಶ್ವಕಾರ್ಮಿಕ ಸಮುದಾಯದಲ್ಲಿ ಭಾರತದ ಕಾರ್ಮಿಕ ಪ್ರತಿನಿಧಿಯಾಗುವಷ್ಟು ಬೆಳೆದವರು. ಇದನ್ನೆಲ್ಲಾ ಜೀವನದ ಕರ್ತವ್ಯ ಅಂತ ಅನುಭವಿಸಿದ ವೆಂಕಟರಾಮ್ ಅವರ ಅಚಲವಾದ ನಂಬಿಕೆಗಳನ್ನು ಯಾರೂ, ಯಾವ ಸನ್ನಿವೇಶಗಳಲ್ಲೂ ಅಲುಗಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಸರ್ಕಾರೀ ನೌಕರರ, ಗಿರಣಿ ಕಾರ್ಮಿಕರ, ವಿದ್ಯುತ್ ನೌಕರರ, ಮುದ್ರಣ, ಡೈರಿ ನೌಕರರ ಸಂಘಗಳಲ್ಲಿ ಕಾರ್ಯನಿರ್ವಹಿಸಿದ ವೆಂಕಟರಾಮ್ ವಿವಿಧಪಕ್ಷಗಳ ಕಾರ್ಮಿಕ ನಾಯಕರುಗಳೆಲ್ಲರಿಂದಲೂ ಪ್ರೀತಿಗೌರವಗಳಿಗೆ ಒಳಗಾದವರು. ಒಂದು ರೀತಿಯಲ್ಲಿ ಅಜಾತಶತ್ರು. ಯಾರನ್ನೂ ದ್ವೇಷಿಸಲರಿಯದ, ತಮ್ಮ ಸಿದ್ಧಾಂತವನ್ನು ಯಾರ ಮೇಲೂ ಬಲವಂತವಾಗಿ ಹೇರದ, ವೆಂಕಟರಾಮ್ ಒಂದು ಸುಗಂಧದ ಕಡ್ಡಿಯಂತೆ. 'ತಾನು ಉರಿದು ಮತ್ತೊಬ್ಬರಿಗೆ ಸುಗಂಧ

ಬೀರುವ ಪರಿಮಳದ್ರವ್ಯದಂತೆ' ಇಂತಹ ವೆಂಕಟರಾಮ್‌ಗೆ ಜೈಲು ಎರಡನೆಯ ಮನೆಯಾಗಿತ್ತು. ನನಗೂ ವೆಂಕಟರಾಮ್ ಅವರಿಗೂ ಅತಿ ಹತ್ತಿರದ ಸಂಬಂಧವಿರಲಿಲ್ಲ. ಆದರೆ ಗೌರವದ ನೆಂಟು. ಬೆಳಗಾವಿಯ ಆರ್‌ಪಿಡಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುವಾಗ ಸಂಪರ್ಕಕ್ಕೆ ಬಂದವರು ಅಲ್ಲಿನ ಸಮಾಜವಾದೀ ಅಧ್ಯಾಪಕರಾದ ಪ್ರೊ.ಯಾಳಗಿ, ಪ್ರೊ ಪಾಗೆ, ಮುಂತಾದವರು. ಬೆಂಗಳೂರಿಗೆ ಬಂದಾಗ ಶ್ರೀ ಕೋಣಂದೂರು ಲಿಂಗಪ್ಪ, ಶ್ರೀ ಬಂಗಾರಪ್ಪ ಮುಂತಾದವರು. ಆದರೆ ಇಲ್ಲಿ ಸಮಾಜವಾದೀ ಗುಂಪು ಬಲಿಷ್ಠವಾಗಿರಲಿಲ್ಲ. ಇದ್ದವರಲ್ಲಿ ಕೆಲವರು ಬುದ್ಧಿಜೀವಿಗಳು ಎಲ್ಲರನ್ನೂ ತಾತ್ಸಾರದಿಂದ ಕುತ್ಸಿತ ಮನೋಭಾವನೆಯಿಂದ ದಡ್ಡ ಜನ ಅಂತ ನೋಡುತ್ತಿದ್ದರು. ಆ ಸಂಧರ್ಭದಲ್ಲಿ ಹತ್ತಿರವಾದವರು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಪ್ರೊ. ಕೆ.ವಿ ಆಚಾರ್ಯ. ಆಚಾರ್ಯ ಆರ್‌ಎಸ್‌ಎಸ್‌ನ ನಿಷ್ಠಾವಂತ ಕಾರ್ಯಕರ್ತರು. ಅವರ ಜತೆ ಒಡನಾಟ, ಅವರಿಂದಾಗಿ ಅಭಾವಿಪ ಸಾಂಗತ್ಯ. ಆಗ ಅನೇಕ ವಿದ್ಯಾರ್ಥಿ ಮುಖಂಡರು ಒಂದೋ ಅಭಾವಿಪದಲ್ಲಿದ್ದರು. ಇಲ್ಲ ಕಾಂಗ್ರೆಸ್‌ನಲ್ಲಿದ್ದರು. ಕರ್ನಾಟಕ ರಾಜಕಾರಣದಲ್ಲಿ ಬಲಿಷ್ಠರಾಗಿ ಮೂಡಿದ ಶ್ರೀ ಪಿ.ಜಿ.ಆರ್.ಸಿಂಧ್ಯ, ಶ್ರೀ ಬಿ.ಎಲ್.ಶಂಕರ್, ಶ್ರೀ ಉಗ್ರಪ್ಪ, ಶ್ರೀ ಅನಂತಕುಮಾರ್, ಅವರಲ್ಲದೆ ಅಮೇಲೆ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಾದ ಅನೇಕರಿಗೆ ಅಭಾವಿಪವೇ ತರಬೇತಿ ಕೇಂದ್ರ. ಬೆಳೆದಂತೆ ಅನೇಕರ ದೃಷ್ಟಿಕೋನದಲ್ಲಿ (ನನ್ನನ್ನೂ ಸೇರಿಸಿ) ಬದಲಾವಣೆಯಾದದ್ದುಂಟು. ಇಂತಹ ಸಂದರ್ಭದಲ್ಲಿ ಬಂದದ್ದು ತುರ್ತುಪರಿಸ್ಥಿತಿ. ಅನೇಕ ನಾಯಕರು ಸೆರೆಮನೆಯಲ್ಲಿ. ನಾವೆಲ್ಲ ಭೂಗತ ಪಡೆ. ಆ ಸಂದರ್ಭದಲ್ಲಿ ಸಮಾಜವಾದೀ, ಅಭಾವಿಪ, ಸಂಸ್ಥಾ ಕಾಂಗ್ರೆಸ್ ಯುವಕರದ್ದೆಲ್ಲಾ ಒಂದೇ ಕೂಟ. ಮತ್ತು ಪರಿಸ್ಥಿತಿಯ ನಂತರ ಹುಟ್ಟಿದ್ದು ಜನತಾಪಕ್ಷ. ಅನೇಕರ ಆಶೋತ್ತರಗಳ, ಪ್ರತೀಕ. ಆದರೆ ಈ ಜನತಾ ಪಕ್ಷ ಒಳಜಗಳಗಳಿಂದ ಒಡೆದು ಚೂರುಚೂರಾಯಿತು. ಈ ಛಿದ್ರಕ್ರಿಯೆಯಲ್ಲಿ ಅನೇಕ ಬುದ್ಧಿಜೀವಿಗಳಿಗೂ ಯಥಾ ಶಕ್ತಿ ಸೇವೆ ಸಲ್ಲಿಸಿದರು. ಅನೇಕ ವರ್ಷಗಳಿಂದ ಅಧಿಕಾರದ ರುಚಿ ನೋಡದವರಿಗೆ ಅಧಿಕಾರ ಸಿಕ್ಕಾಗ 'ಅರ್ಧರಾತ್ರಿಯಲ್ಲಿಬೆಳ್ಗೊಡೆ ಹಿಡಿದರು' ಬೇಕಾಬಿಟ್ಟಿ ಬದುಕಿ, ತಮ್ಮ ಅಧಿಕಾರಗಳನ್ನು ವ್ಯವಸ್ಥಿತವಾಗಿ ಹಾಳುಮಾಡಿಕೊಂಡರು. ವೆಂಕಟರಾಮ್ ಇದರಿಂದ ತುಂಬ ನೊಂದುಕೊಂಡರು.

ಈ ಸಂದರ್ಭದಲ್ಲಿ ನನಗೂ ಶ್ರೀ ಎಸ್.ವೆಂಕಟರಾಮ್ ಅವರಿಗೂ ಮತ್ತೊಮ್ಮೆ ಮರುಕಳಿಸಿದ ಸಂಬಂಧ. ಅವರ ಜತೆ ಮಾತಾಡುವುದೇ ಒಂದು ಅನುಭವ. ಚರಿತ್ರೆ, ಪುರಾಣಗಳ ಬಗ್ಗೆ ಒಳ ನೋಟದ ವಿಶ್ಲೇಷಣೆಗಳನ್ನು ಮಾಡ ಬಲ್ಲ ಅವರ ಜತೆ ಕಳೆ ಸಮಯ ಒಂದು ಅಪೂರ್ವ ಗ್ರಂಥ ಭಂಡಾರವನ್ನು ಹೀರಿಕೊಳ್ಳುವಂತಿತ್ತು. ನಡೆದಾಡುವ ಮಾನವ ಜೀವಕೋಶ ವೆಂಕಟೆರಾವ್, ಜನತಾ ಪಕ್ಷದ ಬೆಳವಣಿಗೆಯಿಂದ ಕನಸು ಭಗ್ನವಾಗಿ ಅವ್ಯವಸ್ತ ಮನಸ್ಕರಾಗಿದ್ದರು.

ನನ್ನ ಅನೇಕ ಗೆಳೆಯರು ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಜೈಲಿನಲ್ಲಿದ್ದರು. ಜೈಲಿನಲ್ಲಿ ಕಳೆದ ಕರಾಳ ದಿನಗಳಂದು ಅವರಿಗೆಲ್ಲ ಸ್ಫೂರ್ತಿದಾಯಕರಾಗಿದ್ದರು. ಶ್ರೀ ವೆಂಕಟರಾಮ್ ಮತ್ತು ಶ್ರೀ ರಾಮಕೃಷ್ಣ ಹೆಗಡೆ, ಅಂತ ಈ ಗೆಳೆಯರು ಹೇಳುತ್ತಿದ್ದರು. ಅವಕಾಶಗಳನ್ನು ಕಣ್ಣಲ್ಲಿ ತುಂಬಿಕೊಂಡು ಮನೆಮಠ, ಹೆತ್ತವರನ್ನೆಲ್ಲಾ ಬಿಟ್ಟು ಜೈಲಿಗೆ ಬಂದ ಈ ಯುವಕರ ಪಡೆಗೆ ಜೈಲಿನ ಒಳಗಡೆಯ ಜೀವನ, ಅಲ್ಲಿ ಅನೇಕ ದೊಡ್ಡವರ ಸಣ್ಣತನ ಕಂಡು ದಿಕ್ಕೆಡುವ ಸಂದರ್ಭದಲ್ಲಿ ಎಸ್. ವೆಂಕಟರಾಮ್ ಇವರಿಗೆಲ್ಲಾ ಒಂದು ಧೈರ್ಯ ತುಂಬುವ ಕನಸುಗಳನ್ನು ವಿಸ್ತರಿಸುವ ಸ್ತಂಭವಾಗಿದ್ದರಂತೆ. ಇವರ ಸಂಪರ್ಕಕ್ಕೆ ಬಂದ ಅನೇಕ ಯುವಕರು ವೆಂಕಟರಾಮೀಕರಣಗೊಂಡಿದ್ದು ಅಚ್ಚರಿಯೇನಲ್ಲ. ಅಂತೂ ನನಗೆ ಉಳಿದ ಗೆಳೆಯರಂತೆ ಅವರ ಸಾಮಿಪ್ಯ ಹೆಚ್ಚು ಕಾಲ ಸಿಗದ ಕಾರಣ ಆಗಬೇಕಾದಷ್ಟು ಜ್ಞಾನಲಾಭ ಆಗಲಿಲ್ಲ.

ನನಗೂ ವೆಂಕಟರಾಮ್ ಕುಟುಂಬಕ್ಕೂ ಇನ್ನೂ ಒಂದು ಸಂಬಂಧ. ಅವರ ಮಗ ಪ್ರದೀಪರ ಪತ್ನಿ ಅನಿತಾ ನನ್ನ ಪತ್ನಿ ಶ್ರೀಮತಿ ರಮಾದೇವಿಯವರ ವಿದ್ಯಾರ್ಥಿನಿ. ಈ ವಿದ್ಯಾರ್ಥಿನಿಗೂ ನಮ್ಮ ಮನೆಗೂ ಹತ್ತಿರದ ಸ್ನೇಹ ಸಂಬಂಧ. ಈ ಸಂಬಂಧ ಘನಿಷ್ಠವಾಗಿ ಅನಿತಾ ನನಗೆ ದತ್ತು ಮಗಳೇ ಆಗಿಬಿಟ್ಟಳು. ಪ್ರದೀಪ ಅನಿತಾ ಮಗ ವರುಣ್ ನನ್ನ ವಿದ್ಯಾರ್ಥಿ. ಪ್ರತಿಭಾವಂತ. ಮಧುರಕಂಠದ ಗಾಯಕ, ಸಂಗೀತಜ್ಞ. ನಮ್ಮಿಬ್ಬರ ಕುಟುಂಬಗಳು ಒಂದು ರೀತಿಯಲ್ಲಿ ಜಾಯಿಂಟ್ ಫ್ಯಾಮಿಲಿ.

ಕಲುಷಿತಗೊಂಡು, ಭ್ರಷ್ಟತೆಯ ಹಾದಿಯಲ್ಲಿ ಸಾಗುತ್ತಿರುವ ಈಗಿನ ವ್ಯವಸ್ಥೆಯಲ್ಲಿ ಶ್ರೀ ಎಸ್.ವೆಂಕಟರಾಮ್ ಇದ್ದಿದ್ದರೆ ? ಅನ್ನುವ ಯೋಚನೆ ಮನಸ್ಸನ್ನು ಕಾಡುತ್ತದೆ. ಬಹುಶಃ ಅವರೂ ಈಗಿನ ವ್ಯವಸ್ಥೆಯಲ್ಲಿ ಅಪ್ರಸ್ತುತರಾಗಿಬಿಡುತ್ತಿದ್ದರೇನೋ? ಕೊರಗಿ ಹೃದಯಾಘಾತಕ್ಕೊಳಗಾಗುತ್ತಿದ್ದರೇನೋ?